

# ಭಗವತ್ಪ್ರೇಮ

ಭಗವತ್ಪ್ರೇಮದ ಒಂದು ಬಿಂದುವೇ ಆಗಲಿ, ಯಾರಿಗಾದರೂ ದೊರೆತದ್ದೇ ಆದರೆ, ಕಾಮಕಾಂಚನ ಅತಿ ತುಚ್ಛವಾಗಿ ತೋರಿಬರುತ್ತದೆ. ಕಲ್ಲುಸಕ್ಕರೆಯ ಪಾನಕ ದೊರೆಯಿತು ಎಂದರೆ, ಜೋನಿ ಬೆಲ್ಲದ ಪಾನಕ ತುಚ್ಛವಾಗಿ ತೋರುತ್ತದೆ. ಭಗವಂತನನ್ನು ವ್ಯಾಕುಲ ಚಿತ್ತದಿಂದ ಪ್ರಾರ್ಥನೆ ಮಾಡಿದರೆ ಆತನ ನಾಮಗುಣಕೀರ್ತನೆಯನ್ನು ಸರ್ವದಾ ಮಾಡುತ್ತಿದ್ದರೆ ಆತನಲ್ಲಿ ಪ್ರೀತಿ ಕ್ರಮೇಣ ಉದ್ಭವವಾಗಿಬಿಡುತ್ತದೆ.

ಯಾವುದಕ್ಕೆ ಪ್ರೇಮ ಅಂತ ಹೇಳುತ್ತಾರೆ ಗೊತ್ತೇ? ಚೈತನ್ಯದೇವನಿಗೆ ಉಂಟಾಗಿತ್ತಲ್ಲ ಅದಕ್ಕೆ. ಯಾರಿಗೆ ಭಗವಂತನಲ್ಲಿ ಪ್ರೇಮ ಉಂಟಾಗುವುದೋ ಅವರಿಗೆ ಈ ಜಗತ್ತೆಂಬುದು ಇದೆ ಎಂಬುದೇ ಮರೆತುಹೋಗಿಬಿಡುತ್ತದೆ. ನೋಡಿ, ಇಷ್ಟು ಪ್ರಿಯವಾದ ಈ ದೇಹ, ಇದೂ ಮರೆತೇ ಹೋಗಿಬಿಡುತ್ತದೆ.

ಭಗವಂತನನ್ನು ಈ ಸ್ಥೂಲಕಣ್ಣುಗಳಿಂದ ನೋಡಲಾಗುವುದಿಲ್ಲ. ಸಾಧನೆ ಮುಂದುವರಿಸುತ್ತ ಸಾಧಕನಿಗೆ ಪ್ರೇಮದ ಶರೀರ ಉಂಟಾಗುತ್ತದೆ. ಅದಕ್ಕೆ ಪ್ರೇಮದ ಕಣ್ಣು, ಪ್ರೇಮದ ಕಿವಿ ಇರುತ್ತದೆ. ಆ ಕಣ್ಣುಗಳಿಂದ ಆತ ನೋಡುತ್ತಾನೆ. ಆ ಕಿವಿಗಳಿಂದ ಭಗವಂತನ ವಾಣಿಯನ್ನು ಕೇಳುತ್ತಾನೆ. ಆ ಪ್ರೇಮದ ಶರೀರದಿಂದ ಪರಮಾತ್ಮನೊಡನೆ ವಿಲಾಸಿಸಬಹುದು

ಭಗವಂತನಲ್ಲಿ ಪ್ರೀತಿ ಉಂಟಾಗದವರೆಗೆ, ಇದು ಸಾಧ್ಯವಿಲ್ಲ. ಬಹಳ ಪ್ರೀತಿ ಉಂಟಾಯಿತು ಎಂದರೆ, ಎಲ್ಲವೂ ಭಗವನ್ಮಯವಾಗಿ ಕಾಣುತ್ತದೆ. ಇದು ಕಾಮಾಲೆ ರೋಗ ಅಧಿಕವಾದರೆ ಎಲ್ಲವೂ ಹಳದಿಯಾಗಿ ಕಾಣುವ ಹಾಗೆ. ಆಗ ಅನುಭವವಾಗುತ್ತದೆ "ನಾನೇ ಅವನು" ಎಂಬುದಾಗಿ.

ಕುಡುಕನಿಗೆ ಅಧಿಕವಾಗಿ ನಿಶಾ ಹತ್ತಿ ಬಿಟ್ಟಿತು ಎಂದರೆ, ಆತ ಹೇಳುತ್ತಾನೆ, "ನಾನೇ ಕಾಳಿ!" ಎಂಬುದಾಗಿ. ಗೋಪಿಯರು ಪ್ರೇಮೋನ್ಮತ್ತರಾಗಿ ಹೇಳಲಾರಂಭಿಸಿದರು "ನಾನೇ ಕೃಷ್ಣ!" ಎಂದು.

ಹಗಲೂ ಇರುಳೂ ಯಾರು ಭಗವಂತನ ಧ್ಯಾನದಲ್ಲೇ ಇರುತ್ತಾನೋ ಆತ ಭಗವಂತನನ್ನು ಎಲ್ಲೆಲ್ಲೂ ನೋಡುತ್ತಾನೆ. ಇದು ಸ್ವಲ್ಪ ಹೊತ್ತಿನವರೆಗೆ ದೀಪದ ಕುಡಿಯ ಕಡೆ ದಿಟ್ಟಿಸಿ ನೋಡುತ್ತಿದ್ದ ಬಳಿಕ ಯಾವ ಕಡೆ ತಿರುಗಿ ನೋಡಿದರೂ ಎಲ್ಲೆಲ್ಲೂ ದೀಪದ ಕುಡಿಯೇ ಕಾಣುವ ಹಾಗೆ.

ಭಗವತ್ಪ್ರೇಮ ಎಲ್ಲರಿಗೂ ಉಂಟಾಗದು. ಗೌರಾಂಗನಿಗೆ ಉಂಟಾಗಿತ್ತು. ಜೀವರಿಗೆ ಭಾವ ಸಾಧ್ಯವಾಗಬಹುದು —ಇಷ್ಟು ಮಾತ್ರವೇ ಇವರಿಗೆ. ಈಶ್ವರ ಕೋಟಿಗಳಿಗೆ, ಅಂದರೆ ಅವತಾರಾದಿಗಳಿಗೆ ಪ್ರೇಮ ಉಂಟಾಗುತ್ತದೆ. ಪ್ರೇಮ ಉಂಟಾಯಿತು ಎಂದರೆ ಈ ಜಗತ್ತು ಮಿಥ್ಯೆ ಎಂಬ ಬೋಧೆ ಆಗುತ್ತದೆ; ಜೊತೆಗೆ ಈ ಶರೀರ ಇದೆಯಲ್ಲ, ಇಷ್ಟೊಂದು ಪ್ರೀತಿಕರವಾದ ವಸ್ತು, ಇದು ಕೂಡಾ ಮರೆತೇ ಹೋಗಿಬಿಡುತ್ತದೆ.

ಪಾರ್ಸಿಗಳ ಒಂದು ಪುಸ್ತಕದಲ್ಲಿ ಬರೆದಿದೆ, ಚರ್ಮದೊಳಗೆ ಮಾಂಸವಿದೆ, ಮಾಂಸದೊಳಗೆ ಮೂಳೆ, ಮೂಳೆಯೊಳಗೆ ಮಜ್ಜೆ, ಇತ್ಯಾದಿ ಇತ್ಯಾದಿ. ಕೊನೆಗೆ ಎಲ್ಲದರ ಒಳಗೆ ಪ್ರೇಮ, ಪ್ರೇಮದಿಂದ ಸಾಧಕ ಕೋಮಲನಾಗಿಯೂ, ಮೃದುವಾಗಿಯೂ ಆಗಿ ಬಿಡುತ್ತಾನೆ. ಪ್ರೇಮದ ದೆಸೆಯಿಂದ ಕೃಷ್ಣ ತ್ರಿಭಂಗಿಯಾಗಿಬಿಟ್ಟಿದ್ದಾನೆ.

ಪ್ರೇಮ ಉಂಟಾಯಿತು ಎಂದರೆ, ಸಚ್ಚಿದಾನಂದನನ್ನು ಕಟ್ಟಿಹಾಕಲು ಒಂದು ಹಗ್ಗ ದೊರೆತ ಹಾಗೆ. ಆತನ ದರ್ಶನ ಮಾಡಬೇಕೆಂಬ ಇಚ್ಛೆಯಾದಾಗಲೆಲ್ಲ ಆ ಹಗ್ಗವನ್ನು ಹಿಡಿದು ಎಳೆದರೇ ಸಾಕು, ಕರೆದಾಗಲೆಲ್ಲ ಒಂದು ದರ್ಶನವೀಯುತ್ತಾನೆ.

ಭಕ್ತಿ ಪಕ್ವವಾಯಿತು ಎಂದರೆ ಭಾವ. ಭಾವ ಉಂಟಾಯಿತು ಎಂದರೆ ಸಾಧಕ ಸಚ್ಚಿದಾನಂದನ ಸಂಬಂಧವಾಗಿ ಭಾವಿಸಿ ಮೂಕನಾಗಿ ಬಿಡುತ್ತಾನೆ.ಮತ್ತೆ, ಭಾವ ಪಕ್ವವಾಯಿತು ಎಂದರೆ, ಮಹಾಭಾವ—ಪ್ರೇಮ. ಇದು ಮಾವಿನಕಾಯಿಗೂ, ಹಣ್ಣಿಗೂ ಇರುವ ವ್ಯತ್ಯಾಸದ ಹಾಗೆ. ಶುದ್ಧ ಭಕ್ತಿಯೇ ಸಾರ, ಉಳಿದುದೆಲ್ಲ ಮಿಥ್ಯೆ.

ಭಗವಂತನನ್ನು ಅತ್ಯಂತವಾಗಿ ಪ್ರೀತಿಸುವುದೇ, ಆತನಲ್ಲಿ ಚಿತ್ತವನ್ನು ತದ್ಗತ ಮಾಡುವುದೇ ಬೇಕಾಗಿರುವುದು. ಅಮೃತತ್ವ ಸರೋವರ ತಾನೆ ಸುಧಾಸರೋವರ? ಅದರಲ್ಲಿ ಮುಳುಗಿದರೆ ಮನುಷ್ಯ ಸಾಯುವುದಿಲ್ಲ; ಅಮರನಾಗಿಬಿಡುತ್ತಾನೆ. ಕೆಲಕೆಲವರು ಭಾವಿಸುತ್ತಾರೆ, ಹೆಚ್ಚಾಗಿ "ಭಗವಂತ! ಭಗವಂತ!" ಅಂತ ಶುರು ಮಾಡಿದರೆ ಕೊನೆಗೆ ಹುಚ್ಚು ಹಿಡಿದು ಬಿಡುತ್ತದೆ ಎಂಬುದಾಗಿ. ಅದು ಸತ್ಯವಲ್ಲ. ಭಗವಂತ ಸುಧೆಯ ಸರೋವರ, ಅಮೃತ ಸಾಗರ. ವೇದದಲ್ಲಿ ಆತನನ್ನು, "ಅಮೃತಸ್ವರೂಪ" ಎಂಬುದಾಗಿ ವರ್ಣಿಸಿದೆ. ಅದರಲ್ಲಿ ಮುಳುಗಿದರೆ ಮನುಷ್ಯ ಸಾಯುವುದಿಲ್ಲ—ಅದಕ್ಕೆ ಬದಲು ಅಮರನಾಗಿಬಿಡುತ್ತಾನೆ.

ಭಗವಂತನಲ್ಲಿ ಪ್ರೇಮ ಉಂಟಾಯಿತು ಎಂದರೆ ಈ ಕರ್ಮಗಳ ವಿಷಯವಾಗಿ ಅತಿಯಾಗೇನು ತಲೆಗೆ ಹಚ್ಚಿಕೊಳ್ಳಬೇಕಾಗಿಲ್ಲ. ಗಾಳಿ ಬೀಸದವರೆಗೆ ಮಾತ್ರವೇ ಬೀಸಣಿಗೆಯ ಆವಶ್ಯಕತೆ. ತಂಗಾಳಿ ಬೀಸಲಾರಂಭಿಸಿತು ಎಂದರೆ ಬೀಸಣಿಗೆಯನ್ನು ಕೆಳಕ್ಕೆ ಇಟ್ಟುಬಿಡಬಹುದು, ಬಳಿಕ ಬೀಸಣಿಗೆಯ ಅವಶ್ಯಕತೆಯೇನಿದೆ?

ಭಗವಂತನಲ್ಲಿ ಭಕ್ತಿಪ್ರೇಮ ದೊರೆತಷ್ಟೂ ನಿನ್ನ ಕರ್ಮ ಕಡಿಮೆ ಕಡಿಮೆಯಾಗುತ್ತಾ ಬಂದುಬಿಡುತ್ತದೆ. ನಿಷ್ಕಾಮ ಭಾವನೆಯಿಂದ ಕೆಲಸ ಮಾಡಲು ಸಾಧ್ಯವಾದರೆ ಚಿತ್ತಶುದ್ಧಿ ಉಂಟಾಗುತ್ತದೆ, ಭಗವಂತನಲ್ಲಿ ನಿನಗೆ ಪ್ರೀತಿ ಉಂಟಾಗುತ್ತದೆ. ಪ್ರೀತಿ ಉಂಟಾಯಿತು ಎಂದರೆ ಆತನ ಸಾಕ್ಷಾತ್ಕಾರ ಪಡೆದುಕೊಳ್ಳುತ್ತೀಯೆ.

ಮುಖ್ಯವಾದುದೇನೆಂದರೆ ಭಗವಂತನನ್ನು ಪ್ರೀತಿಸಬೇಕು. ಅಗಾಧ ಪ್ರೀತಿಯುಂಟಾಯಿತು ಎಂದರೆ ಆತನ ದರ್ಶನ ದೊರೆಯುತ್ತದೆ. ಸತಿಗೆ ಪತಿಯಲ್ಲಿರುವ ಪ್ರೀತಿ, ತಾಯಿಗೆ ಮಗುವಿನಲ್ಲಿರುವ ಪ್ರೀತಿ, ವಿಷಯಾಸಕ್ತನಿಗೆ ವಿಷಯಗಳಲ್ಲಿರುವ ಪ್ರೀತಿ—ಈ ಮೂರು ಪ್ರೀತಿಗಳನ್ನೂ ಒಟ್ಟುಗೂಡಿಸಿ ಭಗವಂತನ ಕಡೆ ತಿರುಗಿಸುವುದಾದರೆ ಆಗ ಆತನ ದರ್ಶನ ದೊರೆಯುತ್ತದೆ.

ಶ್ರೀರಾಮಕೃಷ್ಣ ವಚನವೇದ ದಿಂದ